ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು
ಸಿ.ಸಿ.ನಂ.**55/2022.**
ದಿನಾಂಕಃ**27.11.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | ಸತೀಶ್ ನಾಯ್ಕ | ಚಾಸಾ-1, ಪ್ರಾಸ-1 |
| ತಂದೆಯ ಹೆಸರು | ಹನುಮನಾಯ್ಕ | |
| ವಯಸ್ಸು | 48 ವರ್ಷ | |
| ಉದ್ಯೋಗ | ವ್ಯವಸಾಯ / ಎಲ್ ಐ ಸಿ ಏಜೆಂಟ್ | |
| ವಾಸ | ಲಕ್ಕೆನಹಳ್ಳಿ / ಎಮ್ಮೆದೊಡ್ಡಿ | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ 2 ನನ್ನ ನಾದಿನಿ, ಚಾಸಾ 3 ನನ್ನ ಮಗ, ಚಾಸಾ 4 ರಿಂದ 6 ಹಾಗೂ ಆರೋಪಿತರುಗಳು ಗೊತ್ತು. ದಿಃ31.12.2020 ರಂದು ನಾನು ಮನೆಯಲ್ಲಿ ಇದ್ದೆ. ಆ ಸಮಯದಲ್ಲಿ ಕೋವಿಡ್ ಪ್ರಯುಕ್ತ ಲಾಕ್ ಡೌನ್ ಸಹ ಇತ್ತು. ಆ ದಿನ ರಾತ್ರಿಯಲ್ಲಿ ಎಲ್ಲಾ ಆರೋಪಿತರು ನಮ್ಮ ಮನೆ ಮುಂದೆ ಬಂದು ಆಟೋದಲ್ಲಿ ಡಿ ಜೆ ಹಾಕಿಕೊಂಡು ಹೊಸ ವರ್ಷಾಚಾರಣೆ ಮಾಡುತ್ತಿದ್ದೇವೆ ಎಂದು ಮದ್ಯಪಾನ ಮಾಡಿಕೊಂಡು ಅವಾಚ್ಯವಾಗಿ ಮಾತನಾಡುತ್ತಾ ಕೂಗಾಡುತ್ತಿದ್ದರು. ನಾನು ಆಗ ಆರೋಪಿತರಿಗೆ ಮನೆಯ ಮುಂದಿನಿಂದ ಬೇರೆ ಕಡೆಗೆ ಹೋಗಿ ಆಚರಣೆ ಮಾಡಿ ಎಂದು ಎರಡು-ಮೂರು ಬಾರಿ ಹೇಳಿದೆ. ಆದರೆ ಅವರು ಹೋಗದೆ, ರಾತ್ರಿ ಸುಮಾರು 4 ಗಂಟೆಗೆ ಹೀಗೆ ಗಲಾಟೆ ಮಾಡುತ್ತಿದ್ದರಿಂದ ನಾನು ಮತ್ತೆ ಬೇರೆ ಕಡೆಗೆ ಹೋಗಿ ಎಂದು ಆರೋಪಿತರಿಗೆ ಹೇಳಿದ್ದಕ್ಕೆ ಆರೋಪಿತರೆಲ್ಲರು ಸೇರಿಕೊಂಡು ಅವಾಚ್ಯವಾಗಿ ಬೈದರು ಅವರ ಪೈಕಿ ಮೊದಲಿಗೆ 1 ನೇ ಆರೋಪಿ ಏನೋ ಬೋಳಿಮಗನೆ ಸೂಳೆಮಗನೆ ನಿನ್ನ ತಾಯಿನ್ ಆಡ ನಿನ್ನಅಪ್ಪನ ಜಾಗನ ಇದು ಎಂದು ಬೈಯುತ್ತಾ ಅಲ್ಲಿ ಮನೆ ಕಟ್ಟುವ ಸಲುವಾಗಿ ಇಟ್ಟಿದ್ದ ಇಟ್ಟಿಗೆಯನ್ನು ತೆಗೆದುಕೊಂಡು ನನ್ನ ಎಡ ತೊಡೆಗೆ ಹೊಡೆದನು. ಹಾಗೂ ಉಳಿದ ಆರೋಪಿತರು ಸಹಃ ಅವಾಚ್ಯವಾಗಿ ಬೈದರು. 2 ನೇ ಆರೋಪಿಯು ಅಲ್ಲಿ ಇಟ್ಟಿದ್ದ ರಾಡ್ ಅನ್ನು ತೆಗೆದುಕೊಂಡು ತಲೆಗೆ

ಹೊಡೆಯಲು ಬಂದರು, ಆಗ ನಾನು ಹೊಡೆತದಿಂದ ತಪ್ಪಿಸಿಕೊಂಡರು ಸಹಃ ನನ್ನ ಬಲ ಕೆನ್ನೆಗೆ ಪೆಟ್ಟಾಗಿರುತ್ತದೆ. ನಾನು ಕೂಗಾಡಿದ ಸದ್ದು ಕೇಳಿ ಚಾಸಾ 2, 3 ರವರು ಹೊರಗೆ ಬಂದು ಜಗಳ ಬಿಡಿಸಿ ನನ್ನನ್ನು ಮನೆಯ ಒಳಕ್ಕೆ ಕರೆದುಕೊಂಡು ಹೋದಾಗ. ಜಗಳ ಬಿಡಿಸಲು ಬಂದ ಚಾಸಾ 3 ರವರಿಗೂ ಸಹಃ 1 ನೇ ಆರೋಪಿ ಇಟ್ಟಿಗೆ ಯಿಂದ ಗಲ್ಲಕ್ಕೆ ಹೊಡೆದಿರುತ್ತಾನೆ. ಆರೋಪಿತರು ಚಾಸಾ 2 ರವರಿಗೂ ತಳ್ಳಾಡಿರುತ್ತಾರೆ ಹಾಗೂ 1 ಮತ್ತು 2 ನೇ ಆರೋಪಿತರು ಚಾಸಾ 2 ರವರ ನೈಟಿ ಹಿಡಿದು ಎಳೆದಾಡಿ ಅವರ ಎದೆಗೆ ಮುಟ್ಟಿ ಚಾಸಾ 2 ರವರನ್ನು ಹಳ್ಳಕ್ಕೆ ದೂಡಿರುತ್ತಾರೆ. ನಾನು ಮನೆಯ ಹೊರಗಡೆ ನಿಲ್ಲಿಸಿದ್ದ ಟಿ ವಿಸ್ ಎಸ್ ವಿಕ್ಟರ್ ಸಂಖ್ಯೆ ಕೆಎ 18 ಎಲ್ 2044 ಅನ್ನು ಎತ್ತಿ ಎಸೆದು ಜಖಂ ಗೊಳಿಸಿರುತ್ತಾರೆ.

ನಾನು ಮನೆಯ ಒಳಗಡೆ ಹೋದಾಗ ನನ್ನ ಮನೆಯ ಮುಂದಿನ ಮತ್ತು ಹಿಂಬಾಗಿಲು ಗಳಿಗೆ ಇಟ್ಟಿಗೆನಿಂದ ಹೊಡೆದು ಜಖಂ ಮಾಡಿರುತ್ತಾರೆ. ನಂತರ ನನ್ನ ಬೈಕ್ ಸರಿಪಡಿಸಲು ಸುಮಾರು 23,000/- ಖರ್ಚು ಆಗಿರುತ್ತದೆ. ಆರೋಪಿತರು ನನ್ನನ್ನು ಕುರಿತು ನೀನು ಪೊಲೀಸರಿಗೆ ದೂರು ನೀಡಲು ಹೋದರೆ ನಿಮ್ಮನ್ನು ಕೊಲೆ ಮಾಡುತ್ತೇವೆ ಎಂದು ಬೆದರಿಕೆ ಹಾಕಿರುತ್ತಾರೆ. ಆರೋಪಿತರು ನೀನು ಹೊಸ ಮನೆ ಕಟ್ಟುತ್ತಿದ್ದಿಯಲ್ಲಾ ಇದಕ್ಕೆ ಡೈನಮೆಂಟ್ / ಬಾಂಟ್ ತಂದು ಒಡೆದುಹಾಕುತ್ತೇವೆ ಎಂದು ಬೆದರಿಕೆ ಹಾಕಿರುತ್ತಾರೆ.

ಜಗಳವಾಗುವಾಗ ಚಾಸಾ 6 ರವರು ಸಹಃ ಬಂದು ಜಗಳ ಬಿಡಿಸಿರುತ್ತಾರೆ. ನನಗೆ ಮತ್ತು ಚಸಾ 3 ರವರಿಗೆ ಗಾಯವಾಗಿದ್ದರಿಂದ ಕಡೂರಿನ ಸ. ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆದಿರುತ್ತೇವೆ. ನಂತರ ನಾನು ದಿಃ01.01.2021 ರಂದು ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಂತರ ದಿಃ02.01.2021 ರಂದು ಬೆಳಗ್ಗೆ 11 ಗಂಟೆಗೆ ಬಂದು ನಾನು ತೋರಿಸಿದ

ಜಗಳವಾಗಿದ್ದ ಸ್ಥಳದಲ್ಲಿ ಚಾಸಾ 4, 5 ರವರ ಸಮಕ್ಷಮ 11.30 ಗಂಟೆಯ ವರೆಗೂ ಮಹಜರ್ ಬರೆದು ಪೋಟೋ ತೆಗೆದು ನನ್ನ ಸಹಿ ಪಡೆದರು. ಮಹಜರ್ ಕಾಲದಲ್ಲಿ ಇಟ್ಟಿಗೆ, ರಾಡ್, ಚಾಸಾ2 ರವರು ಆ ದಿನ ಧರಿಸಿದ್ದ ನೈಟಿಯನ್ನು ಅಮಾನತ್ತು ಪಡಿಸಿಕೊಂಡರು. ಸಾಕ್ಷಿಯು ಸದರಿ ಮಹಜರ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಪೋಟೋಗಳಲ್ಲಿ ಸಾಕ್ಷಿಯು ತನ್ನ, ಚಾಸಾ 4, 5, ಪೊಲೀಸರು, ಇಟ್ಟಿಗೆ, ರಾಡ್, ನೈಟಿ, ಜಖಂ ಗೊಳಿಸಿದ್ದ ಬಾಗಿಲನ್ನು ನೋಡಿ ಗುರುತಿಸಿದರು. ಸದರಿ ಪೋಟೋಗಳನ್ನು ನಿಪಿ 3 ರಿಂದ 7 ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 1 ರಿಂದ 3, 5, 6 ನೇ ಆರೋಪಿತರನ್ನುನ ೋಡಿ ಗುರುತಿಸಿದರು.

ಈ ದಿನ 4 ನೇ ಆರೋಪಿಯು ಗೈರುಹಾಜರಾಗಿದ್ದು 4 ನೇ ಆರೋಪಿಯ ಗುರುತಿನ ಬಗ್ಗೆ ತಮ್ಮ ತಕರಾರು ಇರುವುದಿಲ್ಲ ಎಂದು ಆರೋಪಿಯ ಪರ ವಕೀಲರು ಅರ್ಜಿ ಸಲ್ಲಿಸಿ ತಿಳಿಸಿರುತ್ತಾರೆ.

ಆ ದಿನ ಆರೋಪಿತರು ಹಲ್ಲೆ ಉಪಯೋಗಿಸಿದ ಇಟ್ಟಿಗೆ, ರಾಡ್ ಹಾಗೂ ಚಾಸಾ 2 ಧರಿಸಿದ್ದ ನೈಟಿ ನೋಡಿದಲ್ಲಿ ಗುರುತಿಸುತ್ತೇನೆ. ಸಾಕ್ಷಿಯು ಸದರಿ ವಸ್ತುಗಳನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿದ್ದರಿಂದ ಇಟ್ಟಿಗೆಯನ್ನು ಮು ಮಾ 1, ರಾಡ್ ಅನ್ನು ಮು ಮಾ 2 ಹಾಗೂ ನೈಟಿಯನ್ನು ಮು ಮಾ 3 ಎಂದು ಗುರುತಿಸಲಾಯಿತು.

<u>ಪಾಟೀಸವಾಲುಃ ಆರೋಪಿ ಪರ ವಕೀಲರಿಂದ ಃ</u>

ಗಲಾಟೆಯಾಗಿದೆ ಎಂದು ಹೇಳುವ ಸ್ಥಳದಿಂದ ನನ್ನ ಮನೆ ಸುಮಾರು 10 ಹೆಜ್ಜೆ ದೂರದಲ್ಲಿ ಇದೆ. ಆರೋಪಿತರು ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ಆವರು ನನ್ನ ಊರಿನವರು. ನಾನು ಗಲಾಟೆಯಾಗಿದೆ ಎಂದು ಹೇಳುವ ದಿನದಂದು ಹಳ್ಳಿ ಮನೆಯಲ್ಲಿ

ಆರೋಪಿತರು ಹೊಸ ವರ್ಷ ಆಚರಣೆ ಮಾಡುತ್ತಿದ್ದರು ಎಂದರೆ ಸರಿಯಲ್ಲ, ಅವರು ನನ್ನ ಮನೆ ಮುಂದೆ ಮಾಡುತ್ತಿದ್ದರು. ದೂರಿನಲ್ಲಿ ನಾನು ಆಟೋ ರೀಕ್ಷಾ ನಂಬರ್ ಹೇಳಿರುವುದಿಲ್ಲ, ಕತ್ತಲೆಯಾಗಿದ್ದರಿಂದ ಆಟೋ ಸಂಖ್ಯೆಯನ್ನು ನಾನು ಗಮನಿಸಿರುವುದಿಲ್ಲ. ಸಾಮಾನ್ಯವಾಗಿ ರಾತ್ರಿಯ ವೇಳೆಯಲ್ಲಿ ಹಳ್ಳಿಯ ಜನರು ಬೆಳಗ್ಗಿನ ಜಾವಾ 4 ಗಂಟೆಯಲ್ಲಿ ಹೊರಕ್ಕೆ ಬರುವುದಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಆದರೂ ಸಹಃ ಆರೋಪಿತರು ಹಾಡು ಹಾಕಿಕೊಂಡು ಕುಣಿಯುತ್ತಿದ್ದರು. ರಸ್ತೆಯಲ್ಲಿ ಬೀದಿ ದೀಪ ಇತ್ತು. ನಮ್ಮ ಮನೆಯ ಮುಂದಿನ ರಸ್ತೆಯ ಪಕ್ಕದಲ್ಲಿ ಆಟೋ ನಿಲ್ಲಿಸಿಕೊಂಡಿದ್ದರು, ರಸ್ತೆಯಿಂದ ಸುಮಾರು 10 ರಿಂದ 15 ಹೆಜ್ಜೆ ಅಂತರ ಇರಬಹುದು.

ನಾನು ಎಲ್ ಐ ಸಿ ಏಜೆಂಟ್ ಕೆಲಸ ಮಾಡುತ್ತೇನೆ. ಬಾಗಿಲು ಮುರಿದು ಕೆಳಕ್ಕೆ ಬಿದ್ದಿರಲಿಲ್ಲ, ಚಿಲಕ ಕಿತ್ತು ಹೋಗಿ ಹೊಡೆದಿರುವ ಗುರುತುಗಳು ಕಾಣುತ್ತಿತ್ತು. ಗಲಾಟೆಯು ಬೆಳಗ್ಗಿನ ಜಾವಾ 4.30 ರಿಂದ 5 ಗಂಟೆಯ ವರೆಗೂ ಆಗಿರುತ್ತದೆ. ನಮ್ಮ ಊರಿನಿಂದ ಕಡೂರಿಗೆ ಸು. 14 – 15 ಕಿ ಮೀ ದೂರವಿದೆ. ನಮ್ಮ ಊರಿನಿಂದ ಕಡೂರಿಗೆ ಬರಲು ಸುಮಾರು 30 ರಿಂದ 40 ನಿಮಿಷ ಬೇಕು ಎಂದರೆ ಸರಿ. ನಾನು ಕಡೂರಿಗೆ ಬರುವಷ್ಟರಲ್ಲಿ ಬೆಳಗ್ಗೆ 6.15 ರ ಸಮಯವಾಗಿತ್ತೆ ಎಂದರೆ ಸರಿಯಲ್ಲ, 5.40 ಕ್ಕೆ ಬಂದಿರಬಹುದು.

ವೈದ್ಯರ ಮುಂದೆ ನಾನು ಹಲ್ಲೆಯ ವಿಚಾರವನ್ನು ತಿಳಿಸಿರುತ್ತೇನೆ. ಆರೋಪಿತರ ಹೆಸರುಗಳನ್ನು ನಾನು ಹೇಳಿರುತ್ತೇನೆ, ಆದರೆ ಹೆಸರು ಬರೆಸಿರುವುದಿಲ್ಲ. ವೈದ್ಯರು ನನ್ನ ಸಮಕ್ಷಮ ಪೊಲೀಸ್ ಠಾಣೆಗೆ ಪೋನ್ ಮಾಡಿದ್ದರು. ವೈದ್ಯರು ಸು.6 ಗಂಟೆಗೆ ಪೋನ್ ಮಾಡಿ ತಿಳಿಸಿರಬಹುದು. ಪೊಲೀಸರು ಆಸ್ಪತ್ರೆಗೆ ಬಂದು ನನ್ನ ಹೇಳಿಕೆ ಪಡೆದುಕೊಂಡು ಹೋಗಿರುತ್ತಾರೆ. ಸದರಿ ಹೇಳಿಕೆಗೆ ನಾನು ಸಹಿ ಮಾಡಿರುತ್ತೇನೆ. ಪೊಲೀಸರು ಹೇಳಿಕೆ ಪಡೆದು ಕೊಂಡಾಗ ಆಸ್ಪತ್ರೆಯಲ್ಲಿ ನನ್ನ ಜೊತೆ ನನ್ನ ಮಗ, ನನ್ನ ಅಣ್ಣನ ಮಗ ಇದ್ದೆವು. ಹೇಳಿಕೆ ಪಡೆದ ಪೊಲಿಸ್ ಸಿಬ್ಬಂದಿಯ ಹೆಸರು ನನಗೆ ಗೊತ್ತಿಲ್ಲ. ಬೆಳಗ್ಗೆ 6.30 ಕ್ಕೆ ಬಂದ

ಪೊಲೀಸರು ಸುಮಾರು 7 ರ ತನಕ ನನ್ನ ಹೇಳಿಕೆ ಪಡೆದರು. ನಾನು ಬೆಳಗ್ಗೆ ಸುಮಾರು 5.40 ಕ್ಕೆ ಬಂದವರು ಸಂಜೆ ಸು.5.30 ರ ವರೆಗೂ ಚಿಕಿತ್ಸೆ ಪಡೆದಿರುತ್ತೇನೆ. ಆ ನಂತರ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ.

ನನ್ನ ಹೊಸ ಮನೆ ಮತ್ತು ಹಳೆಯ ಮನೆ ಪಕ್ಕ-ಪಕ್ಕದಲ್ಲಿಯೇ ಇದೆ. ಚಾಸಾ 6 ರವರ ಅಂಗಡಿ ನನ್ನ ಮನೆಯ ಪಕ್ಕದಲ್ಲಿ ಇದೆ ಎಂದರೆ ಸರಿ. 4 ನೇ ಆರೋಪಿ ಚಾಸಾ 6 ರವರ ನಾದಿನಿ ಮಗ. ಚಾಸಾ 6 ರವರು ನನ್ನ ಜೊತೆ ಚೆನ್ನಾಗಿ ಇಲ್ಲ ಎಂದರೆ ಸರಿಯಲ್ಲ. ನಾನು ಮೊದಲು ದೂರಿಗೆ ಮಾತ್ರ ಸಹಿ ಮಾಡಿರುತ್ತೇನೆ.

ರಾತ್ರಿ ಕತ್ತಲೆಯಲ್ಲಿ 10 -15 ಹೆಜ್ಜೆ ದೂರದಲ್ಲಿ ಇದ್ದ ವ್ಯಕ್ತಿ ಕಾಣುವುದಿಲ್ಲ ಎಂದರೆ ಸರಿಯಲ್ಲ, ಆ ದಿನ ಅಲ್ಲಿ ಬೀದಿ ದೀಪದ ಬೆಳಕು ಇತ್ತು. ನಿಪಿ 1 ರಲ್ಲಿ ಏನೆನೂ ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಚಾಸಾ 2, 3 ರವರು ಎಷ್ಟು ದೂರದಲ್ಲಿ ನಿಂತಿದ್ದರು ಎಂದರೆ ಸಾಕ್ಷಿಯು ಮನೆಯ ಒಳಗಡೆ ಇದ್ದ ಚಾಸಾ 2, 3 ರವರು ನಾನು ಕೂಗಿದ ಸದ್ದು ಕೇಳಿ ಹೊರಕ್ಕೆ ಓಡಿ ಬಂದು ಗಲಾಟೆ ಬಿಡಿಸಲು ಯತ್ನಿಸಿರುತ್ತಾರೆ. ನಾನು ಹೇಳಿದಂತೆ ಆರೋಪಿತರು ಮತ್ತು ನನ್ನ ನಡುವೆ ಯಾವುದೇ ಗಲಾಟೆ ಆಗಿಲ್ಲ ಎಂದರೆ ಸರಿಯಲ್ಲ.

ಮಹಜರ್ ಸ್ಥಳದ ಚೆಕ್ಕುಬಂಧಿ ನನಗೆ ಗೊತ್ತು. ಮಹಜರಿಗೆ ಸಹಿ ಮಾಡಿರುತ್ತೇನೆ. ಬೇರೆ ಚೀಟಿಗಳಿಗೆ ಸಹಿ ಮಾಡಿರುತ್ತೇನೆ, ಅದನ್ನು ಮು.ಮಾಲುಗಳ ಮೇಲೆ ಅಂಟಿಸಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ರಾಡಿನ ಮೇಲೆ ಆ ದಿನ ರಕ್ತದ ಕಲೆ ಇತ್ತು, ಈಗ ಅದು ಕಾಣುತ್ತಿಲ್ಲ. ನಾನು ಆ ದಿನ ಯಾವ ಅಂಗಿ ಧರಿಸಿದ್ದೆ ಎಂದು ನೆನಪಿಲ್ಲ. ಧಸಿರಿದ್ದ ಅಂಗಿಗೆ ರಕ್ತದ ಕಲೆ ತಾಗಿತ್ತು. ನನ್ನ ಅಂಗಿಯನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡಿಲ್ಲ. ಅಂಗಿ ಕೊಡಲು ನನಗೆ ತೊಂದರೆ ಇರಲಿಲ್ಲ. ಪೊಲೀಸರು ಕೇಳಿರದ ಕಾರಣ ನಾನು ಅಂಗಿ ನೀಡಿರುವುದಿಲ್ಲ. ಮು.ಮಾ.3 ನ್ನು ನಾನು ಪೊಲೀಸರಿಗೆ ನೀಡಿರುತ್ತೇನೆ. ಚಾಸಾ 2 ರವರು ನೈಟಿ ನೀಡಲು ಮುಂದೆ ಬಂದಿಲ್ಲ ನಾನೇ ನೈಟಿ

ನೀಡಿರುತ್ತೇನೆ. ಮಹಜರ್ ಕಾಲದಲ್ಲಿ ಮನೆಯ ಪೋಟೋ ತೆಗೆದಿರುತ್ತಾರೆ.

ಆರೋಪಿತರು ನನಗೆ ಅವಾಚ್ಯವಾಗಿ ಬೈದಿಲ್ಲ, ಕೈನಿಂದ ಅಥವಾ ಯಾವುದೇ ವಸ್ತುಗಳಿಂದ ಹಲ್ಲೆ ಮಾಡಿಲ್ಲ ಹಾಗೂ ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಮು ಮಾ 1 ರ ಮೇಲೆ ನನ್ನ ಸಹಿ ಇಲ್ಲ ಎಂದರೆ ಸರಿ. ನಿಪಿ2 ಕ್ಕೆ ಮೂರು ಜನ ಸಹಿ ಮಾಡಿರುತ್ತೇವೆ. ಚಾಸಾ 4, 5, 6 ರವರು ಸಹಿ ಮಾಡಿರುತ್ತಾರೆ. ಚಾಸಾ 6 ರವರ ಸಹಿ ನಿಪಿ 2 ರಲ್ಲಿ ಇಲ್ಲ ಎಂದರೆ ಸಾಕ್ಷಿಯು ಚಾಸಾ 6 ರವರು ಅಲ್ಲಿಗೆ ಬಂದಿದ್ದರು ಅವರು ಸಹಃ ಮಾಡಿರುತ್ತಾರೆ. ನಿಪಿ 2 ಕ್ಕೆ ಚಾಸಾ 4, 5 ರವರು ಮಾತ್ರ ಸಹಿ ಮಾಡಿರುತ್ತಾರೆ.

ಆರೋಪಿತರ ಮೇಲೆ ನನಗೆ ಇರುವ ದ್ವೇಷದಿಂದ ನಾನು ಅವರ ವಿರುದ್ಧ ಕೇಸು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಕಾಂಗ್ರೇಸ್ ಪಕ್ಷ ಬೆಂಬಲಿಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಬಿ.ಜೆ.ಪಿ. ಪಕ್ಷದ ಬೆಂಬಲಿಗ ಎಂದರೆ ಸರಿಯಲ್ಲ. ನಾನು ಸಹಃ ಕಾಂಗ್ರೇಸ್ ಪಕ್ಷ ಬೆಂಬಲಿಸುತ್ತೇನೆ. ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ನನಗೂ ಮತ್ತು ಆರೋಪಿತರ ನಡುವೆ ದ್ವೇಷವಿತ್ತು ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಮತ್ತು ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಬೆಳಗ್ಗೆ ಎಲ್ ಐ ಸಿ ಕಛೇರಿಗೆ ಹೋದರೆ ಸಂಜೆ ಬರುತ್ತೇನೆ ಎಂದರೆ ಸರಿಯಲ್ಲ. ನಾನು ಕೆಲಸ ಇದ್ದಾಗ ಮಾತ್ರ ಹೋಗುತ್ತೇನೆ. ಚಾಸಾ 4, 5 ರವರನ್ನು ನಾನೇ ಮಹಜರಿಗೆ ಕರೆದಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರು ಬಂದಾಗ ಚಾಸಾ 4, 5 ರವರು ಬಂದಿದ್ದರು. ಗಲಾಟೆಯಾದಾಗ ಚಾಸಾ 4, 5 ರವರು ಇರಲಿಲ್ಲ. ಚಾಸಾ 4, 5 ರವರು ಸಹ ಗಲಾಟೆಯ ಬಗ್ಗೆ ಪೊಲೀಸರಿಗೆ ಹೇಳಿರುತ್ತಾರೆ. ಆರೋಪಿತರು ನನ್ನ ಬೈಕ್ ಒಡೆದುಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಬೈಕಿನ ಜಖಂ ಗೊಂಡ ಭಾಗಗಳನ್ನು ಪೊಲೀಸರು ವಶಪಡಿಸಿಕೊಂಡಿರುವುದಿಲ್ಲ. ಪೊಲೀಸರು ಹಾಜರುಪಡಿಸಿರುವ ಪೋಟೋಗಳಲ್ಲಿ ಬೈಕ್ ಜಖಂ ಗೊಂಡಿಲ್ಲ ಎಂದರೆ ಬೈಕಿವಿನ ಹಿಂಭಾಗ ಜಖಂ ಆಗಿರುತ್ತದೆ. ಜಖಂ ಗೊಂಡಿರುವ ಭಾಗ ಪೋಟೋದಲ್ಲಿ ಕಾಣುತ್ತಿಲ್ಲ

ಎಂದರೆ ಸರಿ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 2 ರವರಿಗೆ ಹಲ್ಲೆ ಮಾಡಿದ್ದನ್ನು ನಾನು ನೋಡಿರುತ್ತೇನೆ. ಚಾಸಾ 2 ರವರು ಆಸ್ಪತ್ರೆಗೆ ಹೋಗಿ ಮಾತ್ರೆ ತೆಗೆದುಕೊಂಡಿರುತ್ತಾರೆ, ಆಕೆಗೆ ಜಾಸ್ತಿ ನೋವು ಆಗಿರಲಿಲ್ಲ. ಚಾಸಾ 2 ರವರು 4-5 ದಿನ ನಮ್ಮ ಮನೆಯಲ್ಲಿಯೇ ಉಳಿದುಕೊಂಡು ನಂತರ ಅವರ ಊರಿಗೆ ಹೋಗಿರುತ್ತಾರೆ. ಚಾಸಾ 2 ರವರು ಚಿಕಿತ್ಸೆ ಪಡೆದಿರುತ್ತಾರೆ ಎಂದು ಹೇಳಿದ ದಾಖಲೆ ಪೊಲೀಸರಿಗೆ ನಾನು ನೀಡಿಲ್ಲ. ಮು ಮಾ 1, 2 ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿಯಲ್ಲ. ಮು ಮಾ 1, 2 ನ್ನು ನಾನು ಮನೆ ಕಟ್ಟಲೆಂದು ತಂದಿದ್ದೆ. ಮು ಮಾ 1 ರ ಮೇಲೆ ಯಾವುದೇ ವಿಶೇಷ ಗುರುತು ಇಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.